ಕರ್ನಾಟಕ ವಿಧಾನಸಭೆ

KARNATAKA LEGISLATIVE ASSEMBLY

Tuesday, 26th April 1977/Vaishaka 6, 1899 SE.

The House met in the Assembly Chamber, Vidhana Soudha at Nine of the Clock.

[MADAM SPEAKER (Smt. K. S. NAGARATHNAMMA) in the Chair.]

STARRED QUESTIONS
(to which oral answers were given)

Continuation of Services of Village Officers

140. SRI M. M. SAJJAN (Muddebihal).—Will the Minister for Revenue be pleased to state:—

(*a*) the reason for continuing the services of Patils, Patels and Setasndis or Walikars or Talwars in villages of the State although the Village Offices have been abolished under the provisions of Village Offices Abolition Act of 1961;

(*b*) whether Government is aware that at present there is no provision in any law to appoint these Village Officers for village administration ;

(*c*) whether Government is aware that such Village Officers are ragularly paid some remuneration (potgi) per annum including the current year;

(*d*) whether the Government is aware that the appointments made by the authorities of the Revenue are set aside by the High Court ;

(*e*) whether Government proposes to appoint such Village Officers for the village administration with a view to assist the Police by sending Khabari (FIR) and writing birth and death registers, etc.,

(*f*) whether Government proposes to pay some salaries to these Village Officers who are working in villages even after Officers Abolition Act has come into force till to-day ?

SRI N. HUTCHAMASTHY GOWDA (Minister for Revenue).—

The services of existing hereditary Patils, Patels and Setasandis or Walibars or Talwars are temporarily continued in the exigencies of work until new arrangements can be brought into effect.

(*b*) Yes.

(*c*) Yes.

(*d*) No.

(*e*) No.

(*f*) Finalisation of Amendment to Land Revenue Act is awaited.

ಶ್ರೀ ಪಿ. ಎಂ. ಬಾಂಗಿ.—(ಅ) ಪ್ರಶ್ನೆಗೆ ಉತ್ತರ ಕೊಡುತ್ತಾ ಹೊಸದಾಗಿ ವ್ಯವಸ್ಥೆಗಳನ್ನು ಮಾಡುವ ತನಕ ಕೆಲಸದ ಅವಶ್ಯಕತೆಯಿಂದಾಗಿ ಈಗಿರುವ ಆನುವಂಶಿಕ ಪಾಟೀಲರು, ಪಟೇಲರು, ಸೆತಸಾಂಡೀಸ್ ಅಥವಾ ವಾಲಿಕರರು ಅಥವಾ ತಳವಾರರ ಸೇವೆಗಳನ್ನು ತಾತ್ಕಾಲಿಕವಾಗಿ ಮುಂದುವರಿಸಲಾಗಿದೆ ಎಂದು ಹೇಳಿದ್ದೀರಿ. ಇವರ ಸರ್ವೀಸ್ ಮುಂದುವರಿಸುವುದಕ್ಕೆ ಆದೇಶ ಏನಾದರೂ ಕೊಟ್ಟಿದ್ದೀರಾ? ಹಾಗಿದ್ದರೆ ಎಂದು ಕೊಟ್ಟಿದ್ದೀರಾ ?

†ಶ್ರೀ ಎನ್. ಹುಚ್ಚಮಾಸ್ತಿಗೌಡ.—ವರ್ಷೇ ವರ್ಷೇ ಒಂದು ವರ್ಷಗಳಿಕಾಲ ಮುಂದುವರಿಸುವ ಬಗ್ಗೆ ಸರ್ಕಾರದಿಂದ ನಿರ್ದೇಶನ ಕಳುಹಿಸಿದೆ. ಈ ವರ್ಷದ್ದೂ ಕೂಡ 10-2-1977ರ ನ ತೀರ್ಮಾನವನ್ನು ಜಾರಿಗೊಳಿಸಿದೆ.

ಶ್ರೀ ಪಿ. ಎಂ. ಬಾಂಗಿ.—ಇಂದಿನವರೆಗೂ ಅವರಿಗೆ ಅರ್ಜೀಯನ್ನು ಕೊಡಬೇ ಅವರು ಯಾರೂ ಚಾವಡಿಗೆ ಬರುತ್ತಾ ಇಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಆನುವಂಶಿಕವಾದ ವ್ಯವಸ್ಥೆ ಹೋದಮೇಲೆ ಅವರು ಇಷ್ಟ ಪಟ್ಟಲ್ಲಿ ಮೊದಲು ಏನು ಸಂಭಾವನೆಗಳು ದೊರಕುತ್ತಿದ್ದವೋ ಆ ಸಂಭಾವನೆಯನ್ನು ತೆಗೆದು ಕೊಂಡು ಕೆಲಸ ಮಾಡುವುದಕ್ಕೆ ಇಷ್ಟವಿದ್ದರೆ ಮಾಡಬಹುದೆಂದು ತೀರ್ಮಾನವಾಗಿದೆ. ಇಷ್ಟವಿದ್ದವರು ಮುಂದುವರಿಸಬಹುದು.

ಶ್ರೀ ಜೆ. ಎಲ್. ಕಟ್ಟಾಡಿ.—ಸ್ವಾಮಿ, ಇಲ್ಲಿಯವರೆವಿಗೂ ಇದ್ದ ಪಟೇಲರ ಕಡೆಯಿಂದ ದಳಪತಿಗಳಿಗೆ ಚಾರ್ಜ್ ಕೊಡಿಸಿ ಬುಕ್ಕುಗಳನ್ನು ಅವರಿಗೆ ಕೊಟ್ಟಿರುವುದು ನಿಜವೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ದಳಪತಿಗಳಿಗೂ ಪಟೇಲರುಗಳಿಗೂ ಸಂಬಂಧ ಇಲ್ಲ. ಪೋಲೀಸ್ ಪಟೇಲರಿಗೆ ಬದಲಾಗಿ ದಳಪತಿಗಳನ್ನು ನೇಮಿಸಿದೆ. ದಳಪತಿಗಳ ಕೆಲಸ ಜನನ ಮರಣ ಬರೆಯುತಕ್ಕದ್ದು. ಇದು ರೆವಿನ್ಯೂ ಇಲಾಖೆಗೆ ಸಂಬಂಧಪಟ್ಟದ್ದಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಭೂ ಶಾಸನ ತಿದ್ದುಪಡಿ ಸಂಭಾವನೆ ಸಂಬಂಧಪಟ್ಟದ್ದೋ ಅಥವಾ ಬೇರೆ ವಿಚಾರಕ್ಕೆ ಸಂಬಂಧಪಟ್ಟದ್ದೋ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇವರನ್ನು ನೇಮಿಸಿಕೊಳ್ಳಬೇಕ್ಕೇ ಬೇಡವೇ ಎನ್ನುವುದು ಮೂಲ ಪ್ರಶ್ನೆ. ನೇಮಿಸಿಕೊಳ್ಳುವುದಾದರೆ ಇವರಿಗೆ ಏನು ಅಧಿಕಾರ ಕೊಡಬೇಕ್ಕು ಸಂಭಾವನೆ ಏನು ಕೊಡಬೇಕು ಎಂಬುದನ್ನು ನಾವು ವಿಮರ್ಶೆ ಮಾಡುತ್ತಿದ್ದೇವೆ. ಅದಷ್ಟು ಬೇಗ ತೀರ್ಮಾನ ತೆಗೆದುಕೊಳ್ಳಬೇಕು ಎನ್ನುವ ಆಸೆ ನನಗೆ ಇದೆ. ಈ ಲ್ಯಾಂಡ್ ರೆವಿನ್ಯೂ ಆಕ್ಟ್‌ನ್ನೇ ತಿದ್ದುಪಡಿ ಮಾಡತಕ್ಕ ದಿಸೆಯಲ್ಲಿ ಆಲೋಚನೆ ಮಾಡುತ್ತಿದ್ದೇವೆ. ಅದು ಕಾರ್ಯಗತವಾಗಬಹುದೆಂದು ಯೋಚನೆ ಮಾಡಿ ಇದನ್ನೇ ಪ್ರತ್ಯೇಕವಾಗಿ ತೆಗೆದುಕೊಂಡು ಬಂದು ತಿದ್ದುಪಡಿ ಮಾಡತಕ್ಕ ಆಲೋಚನೆ ಇದೆ.

---

† indicate that remarks or speeches have not been revised by the member concerned

ಶ್ರೀ ಬಿ. ಬೈರಪ್ಪಾಜಿ —ರಾಜ್ಯದಲ್ಲಿ ಅನೇಕ ಕಡೆ ಜನನ ಮರಣದ ಬಗ್ಗೆ ದಾಖಲಾತಿಗಳನ್ನು ಎರೆಯುತಕ್ಕವ್ದನ್ನು ನಿಲ್ಲಿಸಿರತಕ್ಕದ್ದು ಸರ್ಕಾರದ ಗಮನಕ್ಕೆ ಬಂದಿದೆಯೆ ? ಪೊಲೀಸ್ ಪಟೇಲರಾ ಗಲೀ, ದಳಪತಿಯಾಗಲೀ ಯಾರೂ ಬರೆಯುತ್ತಿಲ್ಲ. ಇದು ಬಹಳ ಮುಖ್ಯವಾದ ದಾಖಲೆಯಾಗಿದ್ದು? ಅನೇಕರಿಗೆ ಮುಂದಿನ ಭವಿಷ್ಯತ್ತಿನಲ್ಲಿ ತೊಂದರೆಯಾಗುವುದನ್ನು ತಪ್ಪಿಸಲಿಕ್ಕೆ ಸೂಕ್ತ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ದಾಖಲೆಗಳನ್ನು ಬರೆಯುವುದನ್ನು ನಿಲ್ಲಿಸಿದ್ದಾರೆ ಎನ್ನುವ ಉದ್ದೇಶದಿಂದಲೇ, ದಳಪತಿಗಳ ಮೂಲಕ ಈ ಕೆಲಸವನ್ನು ಮಾಡಿಸಬೇಕೆಂದು ಯೋಚನೆ ಮಾಡಿ, ಬೇರೆ ಇರಾಖೆಯಿಂದಲೂ ದಳಪತಿಗಳನ್ನು ನೇಮಕ ಮಾಡುವ ಬಗ್ಗೆ ಸರ್ಕಾರಿ ಹುಕುಂ ಈಗಾಗಲೇ ಜಾರಿಯಾಗಿದೆ. ಇನ್ನೂ ಕೆಲವು ಕಡೆ ನೇಮಕವಾಗುವುದು ಇದೆ.

ಶ್ರೀ ಕಾಗೋಡು ತಿಮ್ಮಪ್ಪ.—ಕಾಂಗ್ರೆಸ್ ದಳಪತಿಗಳೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಕಾಂಗ್ರೆಸ್ ದಳಪತಿ, ಜನತಾ ದಳಪತಿ, ಸೋಷಲಿಸ್ಟ್ ದಳಪತಿ ಎಂದು ಹೆಸರು ಇಟ್ಟಿಲ್ಲ. ದಳಪತಿ ಎಂದು ಮಾತ್ರ ಕರೆಯುತ್ತಿದ್ದೇವೆ.

ಶ್ರೀ ಜೆ. ಜಲ್. ಕಬಾಡೆ.—ಕೆಲವೊಂದು ಊರುಗಳಲ್ಲಿ ಪೋಲೀಸ್ ಪಟೇಲ್ ಮತ್ತು ದಳಪತಿ ಇಬ್ಬರೂ ಇದ್ದು ಜನನ ಮರಣ ದಾಖಲಾತಿಗಳನ್ನು ಯಾರು ಇಡಬೇಕು ಎನ್ನುವ ಬಗ್ಗೆ ಆಜ್ಞೆ ಇಲ್ಲ. ಅಲ್ಲದೆ ಯಾವ ರೀತಿಯಿಂದ ಕೆಲಸ ಮಾಡಬೇಕು ಎಂದು ಅವರಿಗೆ ತಿಳಿಸಿಲ್ಲ. ಮುಂಜೆ ದಳಪತಿಯನ್ನು ಮಾಡಬೇಕಾದರೆ ಪ್ರಮುಖರನ್ನು ಕೂಡಿಸಿಕೊಂಡು ದಳ ಮಾಡಿ ಅದಕ್ಕೆ ಪತಿ ಮಾಡಬೇಕೆಂದು ಆದೇಶ ಇತ್ತು ಈಗ ದಳ ಇಲ್ಲದೆ ಪತಿ ಮಾಡುವುದಕ್ಕೆ ಹೊರಟಿದ್ದಾರೆ. ಈ ವಿಚಾರದಲ್ಲಿ ಎಷ್ಟೋ ಜನ ಹೈಕೋರ್ಟಿಗೆ ರಿಟ್ ಹಾಕಿದ್ದಾರೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ದಳ ಇಲ್ಲದೆ ದಳಪತಿ ನೇಮಿಸುವುದಕ್ಕೆ ಸಾಧ್ಯ ಇದೆ. ಈಗ ಫಾಲೋಯರ್ಸ್ ಇಲ್ಲದೆ, ನಾಯಕರಾಗತಕ್ಕ ಸಂಭವವೂ ಬಹಳ ಇದೆ.

ಶ್ರೀ ಬಿ. ಬೈರಪ್ಪಾಜಿ.—ತುಮಕೂರು ಜಿಲ್ಲೆಯಲ್ಲಿ ದಳಪತಿಗಳನ್ನು ನೇಮಿಸಿದ್ದೀರಾ ? ಅವರು ಏನು ಕೆಲಸ ಮಾಡುತ್ತಿದ್ದಾರೆ ? ಆ ರೀತಿ ಮಾಡದೇ ಇದ್ದರೆ ಇದು ಅನ್ಪಪ್ಪವಾದ ನೀತಿ ಯಲ್ಲವೇ ? ಇದನ್ನು ವ್ಯವಸ್ಥಿತವಾದ ರೀತಿಯಲ್ಲಿ ಮಾಡಿ ಸಮಗ್ರವಾದ ಕಾರ್ಯಕ್ರಮ ನಡೆಯು ವುದಕ್ಕೆ ಏನು ಏರ್ಪಾಡು ಮಾಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇದು ನನ್ನ ಇಲಾಖೆಗೆ ಸಂಬಂಧಪಟ್ಟ ಪ್ರಶ್ನೆ ಅಲ್ಲ ? ಹೆಚ್ಚು ವಿವರಗಳು ನನ್ನಹತ್ತಿರ ಇಲ್ಲ.

ಶ್ರೀ ಪಿ. ಎಂ. ಬಾಂಗಿ.—ದಳಪತಿ ನೇಮಿಸಿದ ನಂತರ ಅವರಿಗೆ ಚಾರ್ಜ್ ಕೊಟ್ಟಿಲ್ಲ ? ರೆಮ್ಯೂನರೇಷನ್ ಕೊಡದೇ ಅವರು ಕೆಲಸ ಸಹ ಮಾಡುತ್ತಿಲ್ಲ. ಇದ್ದರಿಂದ ನಮ್ಮ ಭಾಗದಲ್ಲ ಅವ್ಯವಸ್ಥೆ ಉಂಟಾಗಿದೆ. ಇನ್ನು ಮುಂದೆ ಆ ರೀತಿ ಆಗದಂತೆ ಸರಿ ಮಾಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ —ನಾನು ಆಗಲೇ ಹೇಳಿದ್ದೇನೆ ಇದು ನನ್ನ ಇಲಾಖೆಗೆ ಸಂಬಂಧಪಟ್ಟ ಪ್ರಶ್ನೆ ಅಲ್ಲ. ಮಾನ್ಯ ಸದಸ್ಯರ ಅಭಿಪ್ರಾಯವನ್ನು ಸಂಬಂಧಪಟ್ಟ ಇಲಾಖೆಗೆ ತಿಳಿಸಿ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

Resurvey to determine industrial Backwardness

146 SHRI S. M. SHEERNALY CHANDRASHEKAR (Hosanagar).—Will the Minsster for Industries and Parliamentary Affairs be pleased to state:—

(*a*) whether Government is aware of the assurance given on the floor of the House that some resurvey would be conducted to determine which area is backward in industry ;